**ದಿಃ29.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಎದುರುದಾರರ ಪರ ವಕೀಲರಿಂದಃ**

ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದ ಅಂಶಗಳು ನನಗೆ ಗೊತ್ತಿಲ್ಲ ಅಂದರೆ ಸರಿ. ನಾನು ಅಪಘಾತಕ್ಕೆ ಸಂಬಂದಿಸಿದಂತೆ ಠಾಣೆಗೆ ಹೋಗಿರುವುದಿಲ್ಲ. ಸಾಕ್ಷ್ಯ ಪ್ರಮಾಣ ಪತ್ರದೊಂದಿಗೆ ಏನು ದಾಖಲೆಗಳು ಕೊಟ್ಟಿರುತ್ತೇನೆಂದು ನನಗೆ ಗೊತ್ತಿಲ್ಲ.

ಅಪಘಾತ ಕಾಲಕ್ಕೆ ನನ್ನ ಗಂಡನಿಗೆ ಟ್ರ್ಯಾಕ್ಟರ್ ಡಿಕ್ಕಿ ಪಡಿಸಿರುತ್ತದೆ. ಅಪಘಾತ ನನ್ನ ಗಂಡನ ಬೈಕ ಮತ್ತು ಟ್ರ್ಯಾಕ್ಟರ್ ನಡುವೆ ಆಗಿರುತ್ತದೆ. ಅಪಘಾತದ ವಿಚಾರವನ್ನು ನಿಮಗೆ ಯಾರು ಹೇಳಿರುತ್ತಾರೆ ಎಂಬ ಪ್ರಶ್ನೇಗೆ ಸಾಕ್ಷೀ ಯಾರು ಹೇಳಿರುವುದಿಲ್ಲ ಎನ್ನುತ್ತಾರೆ. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಅಪಘಾತ ಸ್ಥಳದಲ್ಲಿದ್ದವರು ಅಪಘಾತದ ಬಗ್ಗೆ ನನಗೆ ತಿಳಿಸಿರುತ್ತಾರೆ.

ನನ್ನ ಗಂಡ ಫೆಡರಲ್ ಬ್ಯಾಂಕನಲ್ಲಿ ಸೆಕ್ಯೂರಿಟಿ ಕೆಲಸ ಮಾಡುತ್ತಿದ್ದರು. ನನ್ನ ಗಂಡ ಬೆಳಗ್ಗೆ 7.00 ಗಂಟೆಯಿಂದ ರಾತ್ರಿ 8.00 ಗಂಟೆಯವರೆಗೆ ಕೆಲಸ ಮಾಡುತ್ತಿದ್ದರು. ಕೆಲಸದ ಅವಧಿಯ ನಂತರ ನನ್ನ ಗಂಡ ಕುಡಿದುಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ಕುಡಿತದ ಅಮಲಿನಲ್ಲಿ ನನ್ನಗಂಡ ವಾಹನ ಚಾಲನೆ ಮಾಡಿ ಯಾವುದೋ ವಾಹನಕ್ಕೆ ಅಪಘಾತ ಪಡಿಸಿಕೊಂಡಿದ್ದು ನನ್ನ ಅಣ್ಣ ಖೊಟ್ಟಿಪ್ರಕರಣವನ್ನು ಪರಿಹಾರ ಪಡೆಯಲು ದಾಖಲಿಸಿರುತ್ತಾನೆ ಎಂದರೆ

ಸರಿಯಲ್ಲ.

ಅಪಘಾತದ ಸ್ಥಳವನ್ನು ನಾನು ನೋಡಿರುವುದಿಲ್ಲ. ಅಪಘಾತಕ್ಕೆ ಒಳಗಾದ ಎರಡು ವಾಹನಗಳನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ಈ ಅರ್ಜಿಯನ್ನು ಯಾರ ವಿರುದ್ಧ ಸಲ್ಲಿಸಿರುತ್ತೇನೆಂದು ನನಗೆ ಗೊತ್ತಿಲ್ಲ. ಅಪಘಾತ ಪಡಿಸಿತು ಎನ್ನಲಾದ ವಾಹನ ಅವರಿಗೆಸೇರಿರುತ್ತದಯೇ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಈ ಅರ್ಜಿಯಲ್ಲಿ ಹಾಜರು ಪಡಿಸಿದ ದಾಖಲೆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಆ ದಾಖಲೆಗಳು ಯಾವ ವಿಷಯಕ್ಕೆ ಸಂಬಂದಿಸಿವೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಅಣ್ಣ ಹೇಳಿದ ಮೇರೆಗೆ ನಾನು ಅರ್ಜಿಗೆ ಸಹಿ ಮಾಡಿರುತ್ತೆನೆ ಎಂದರೆ ಸರಿ.

**ಮರುವಿಚಾರಣೆಃ – ಇಲ್ಲ.**

(ತೆರೆದ ನ್ಯಾಯಲಯದಲ್ಲಿ ಬೆರಳಚ್ಚುಗಾರರು ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.**